General Hospital at Pavagada

763. Sri P. ANJANAPPA (Pavagada).—

Will the Minister for Health be pleased to state :—

whether Government propose to provide General Hospital to Pavagada ?

Sri G. BASAVANNAPPA (Deputy Minister for Health).—

The matter is under examination.

ಶ್ರೀ ಪಿ. ಆಂಜನಪ್ಪ.—ಉತ್ತರದಲ್ಲಿ ಈ ವಿಷಯವನ್ನು ಪರೀಕ್ಷಿಸಲಾಗುತ್ತಿದೆಯೆಂದು ಹೇಳಿದೆ. ಯಾವತ್ತು ಪರೀಕ್ಷೆ ಮಾಡಿ ತೀರ್ಮಾನಮಾಡುತ್ತೀರಾ ಮತ್ತು ಇದನ್ನು ಈ ತಕ್ಷಣ ಮಾಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ತಾಲ್ಲೂಕ್ ಬೋರ್ಡ್ ಅಧ್ಯಕ್ಷರು ಅಲ್ಲಿ ಒಂದು ಜನರಲ್ ಹಾಸ್ಪಿಟಲ್ ಆಗಬೇಕೆಂದು ಒಂದು ಪತ್ರವನ್ನು ಸರ್ಕಾರಕ್ಕೆ 30-12-68 ರಲ್ಲಿ ಕಳುಹಿಸಿದ್ದಾರೆ. ಅದಕ್ಕೋಸ್ಕರ ಸೇಕಡ 25 ರಷ್ಟು ಕಂಟ್ರಿಬ್ಯೂಷನ್ ಕೊಡುವುದಕ್ಕೆ ಒಪ್ಪಿಕೊಂಡಿದ್ದರೂ ಮುನಿಸಿಪಾಲಿಟಿಯಿಂದ ಯಾವ ತೀರ್ಮಾನವೂ ಬಂದಿಲ್ಲ. ಆದ್ದರಿಂದ ಅದು ಹಾಗೆಯೇ ಉಳಿದಿದೆ.

ಶ್ರೀ ಪಿ. ಆಂಜನಪ್ಪ.—ಮುನಿಸಿಪಾಲಿಟಿಯಿಂದ ಬಂದರೆ ತಕ್ಷಣ ಈ ಕಾರ್ಯವನ್ನು ಕೈಗೊಳ್ಳುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಆ ರೀತಿಯಾಗಿ ಭರವಸೆ ಕೊಡುವುದಕ್ಕಾಗುವುದಿಲ್ಲ. ಈಗ ಈ ಜನರಲ್ ಹಾಸ್ಪಿಟಲ್‌ಗಳನ್ನು ಮಾಡುವುದು ಒಂದು ಲಿಮಿಟೆಡ್ ಪ್ರೋಗ್ರಾಮಾಗಿರುವುದರಿಂದ ಅಲ್ಲಿ ಜನರಲ್ ಹಾಸ್ಪಿಟಲ್ ಮಾಡಿಯೇ ಮಾಡುತ್ತೇವೆಂದು ಈಗಲೇ ಭರವಸೆ ಕೊಡುವುದಕ್ಕೆ ಆಗುವುದಿಲ್ಲ.

Sri B. P. GANGADHAR.—Since Pavagada is situated in almost another corner of the State and is about 66 miles from Tumkur and it is very difficult for the patients to approach General Hospital at Tumkur, will it not be possible for the Government at least to provide all the necessary equipments and extend the present hospital to meet the required demands ?

Sri G. BASAVANNAPPA.—The matter will be examined.

Mr. SPEAKER.—Question numbers 769 and 770 may be taken up together.

Restoration of Minor Tanks in Pavagada Taluk

769. Sri P. ANJANAPPA (Pavagada).—

Will the Minister of State for Minor Irrigation be pleased to state :—

whether Government have proposal to restore the following Minor Tanks in Pavagada Taluk which are breached *viz.* :—

(i) Siddappakere at Pavagada.

(ii) Kanivehallikere in Kanivehalli ?

Sri D. PARMESHWARAPPA (Deputy Minister for Major Irrigation and Electricity) [On behalf of SRI A. J. DODDAMETI (Minister of State for Minor Irrigation)].—

No.

New Tanks in Pavagada Taluk

770. Sri P. ANJANAPPA (Pavagada).—

Will the Minister of State for Minor Irrigation be pleased to state :—

whether Government have proposals to take up the following Tanks in Pavagada Taluk for execution *viz.*,

(i) kumbarakatte at Kilarlahalli
(ii) new Tanx at Sreerangapura
(iii) new Tank at Kenchammanahalli
(iv) new Tank at Veeragondi
(v) raising Wasteweir of Bydanur Tank by 3 feet
(vi) raising Wasteweir of Kadapalakere Tank
(vii) raising of Wastewair Thangalamadagu Tank at Pothagavalahalli.
(viii) raising of Waste Weir of Jalodu Tank ?

Sri D. PARMESWARAPPA (Deputy Minister for Major Irrigation and Electricity) [On behalf of SRI A. J. DODDAMETI (Minister of State for Minor Irrigation)].—

(i) No.
(ii) Under investigation.
(iii) No.
(iv) Yes.
(v) No.
(vi) No.
(vii) No.
(viii) No.

ಶ್ರೀ ಪಿ. ಆಂಜನಪ್ಪ.—ಈ ಎರಡು ಕೆರೆಗಳು ಬ್ರೀಚ್ ಆಗಿವೆ. ಇವನ್ನು ರೆಸ್ಟೋರ್ ಮಾಡುತ್ತೀರಾ ?

† ಶ್ರೀ ಡಿ. ಪರಮೇಶ್ವರಪ್ಪ.—ಈ ಕೆರೆಗಳು ಪಿ.ಡಬ್ಲ್ಯು.ಡಿ. ಗೆ ಸೇರಿದಂಥ ಕೆರೆಗಳು ಎಂಬುದಾಗಿ ಆಧಾರ ದೊರೆತಿಲ್ಲ. ಆದ್ದರಿಂದ ಇವು ಪ್ರೈವೇಟ್ ಟ್ಯಾಂಕ್ಸ್. ಈ ಟ್ಯಾಂಕ್ಸ್ ಬೆಡ್‌ನಲ್ಲಿ ಸಾಗುವಳಿ ಮಾಡುವುದಕ್ಕೆ ಸರ್ಕಾರಕ್ಕೆ ಇದುವರೆಗೂ ಯಾವ ಮನವಿಯೂ ಬಂದಿಲ್ಲ.

ಶ್ರೀ ಪಿ. ಆಂಜನಪ್ಪ.—ಇವು ಸರ್ಕಾರದ ಕೆರೆಗಳು. ಪ್ರೈವೇಟ್ ಕೆರೆಗಳಲ್ಲ. ಇದನ್ನು ರೆಸ್ಟೋರ್ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರಕ್ಕೆ ಆಲೋಚನೆಯುದೆಯೇ ?

ಶ್ರೀ ಡಿ. ಪರಮೇಶ್ವರಪ್ಪ.—ಸರ್ಕಾರಕ್ಕೆ ಆ ರೀತಿ ಮನವಿ ಬಂದರೆ ಅದನ್ನು ಪರಿಶೀಲನೆ ಮಾಡುತ್ತೇವೆ.